# ವೃತ್ತಿ ಘನ, ಜಾತಿಯಲ್ಲ

ಗುಜರಾತಿನ ಗಿರ್ ಸೋಮನಾಥ್ ಜಿಲ್ಲೆಯ ಊನಾ ಎಂಬ ಪಟ್ಟಣದಲ್ಲಿ ಗೋರಕ್ಷಕ ವೇಷಧಾರಿಗಳು ನಾಲ್ವರು ದಲಿತ ಯುವಕರನ್ನು ಗೋವನ್ನು ಹತ್ಯೆಗೈದು ಚರ್ಮ ಸುಲಿಯುತ್ತಿದ್ದರೆಂದು ಆಪಾದಿಸಿ, ಕಾರಿಗೆ ಕಟ್ಟಿ ಕಬ್ಬಿಣದ ಸಲಾಕೆಗಳಿಂದ ಥಳಿಸಿ, ಅದನ್ನು ಸಾಮಾಜಿಕ ಜಾಲತಾಣಗಳಿಗೆ ಹಾಕಿ ಇಡೀ ದೇಶದ ಗೋಹಂತಕರಿಗೆ ಒಂದು ಎಚ್ಚರಿಕೆಯ ಸಂದೇಶವನ್ನು ನೀಡಿದ್ದೇವೆಂದು ಬೀಗುತ್ತಿದ್ದರು. ಅದರ ಪರಿಣಾಮವು ಸೃಷ್ಟಿ ಮಾಡುವ ಅನಾಹುತಗಳ ಬಗ್ಗೆ ಅರಿವಿದ್ದಂತಿರಲಿಲ್ಲ. ಅವರನ್ನು ಅನುಕರಿಸಿ ದೇಶದ ಇತರೆಡೆಯೂ ಅಲ್ಲಲ್ಲಿ ಇಂಥವೇ ಘಟನೆಗಳು ನಡೆದವು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅತಿ ಕಡಿಮೆ ಸಂಖ್ಯೆಯಲ್ಲಿರುವ ಗುಜರಾತಿನ ದಲಿತರು ಈ ಬಾರಿ ಎಚ್ಚೆತ್ತುಕೊಂಡು ವಿನೂತನವಾದ ಪ್ರತಿಭಟನೆಗಿಳಿದರು. ರಾಜ್ಯದಾದ್ಯಂತ ಜನರನ್ನು ಸಂಘಟಿಸಿ ಜಾಥಾ ಏರ್ಪಡಿಸಿ ಊನಾ ಪಟ್ಟಣದಲ್ಲಿ ಸ್ವಾತಂತ್ರ್ಯ ದಿನದಂದೇ ಸಮಾವೇಶ ನಡೆಸಿ 'ದನದ ಬಾಲವನ್ನು ನೀವೇ ಇಟ್ಟುಕೊಳ್ಳಿ, ನಮಗೆ ಭೂಮಿ ಕೊಡಿ' ಎಂಬ ಅರ್ಥಪೂರ್ಣ ಹಕ್ಕೊತ್ತಾಯವನ್ನು ಮಂಡಿಸಿದರು. ಅಷ್ಟೇ ಅಲ್ಲದೆ ತಮ್ಮ ವೃತ್ತಿಗೆ ಅಡ್ಡಿಬರುವುದಾದರೆ ಮತ್ತು ಇಂತಹ ಭಯಾನಕ ಶಿಕ್ಷೆ ನೀಡುವುದಾದರೆ ನಾವು ಆ ವೃತ್ತಿಯನ್ನು ಮಾಡುವುದಿಲ್ಲ, ನೀವೇ ಮಾಡಿಕೊಳ್ಳಿ ಎಂಬ ಸಂದೇಶ ಕಳುಹಿಸಿದರು. ಹಸುವು ನಿಮಗೆ ತಾಯಿ, ಅದನ್ನು ನೀವು ಪೂಜಿಸುತ್ತೀರಿ. ನಿಮ್ಮ ತಾಯಿ ಸತ್ತು ಬಿದ್ದಿರುವಾಗ ಆಕೆಯ ಅಂತ್ಯಸಂಸ್ಕಾರವನ್ನು ನೀವೇ ಮಾಡಿರಿ ಎಂದು ಕೈಚೆಲ್ಲಿದರು. ಊರಿಗೆ ಊರೇ ದುರ್ನಾತದಿಂದ ನಾರುವುದಕ್ಕೆ ಶುರುವಾಯಿತು. ತಲೆತಲಾಂತರದಿಂದ ವೃತ್ತಿಗಳನ್ನು ಜಾತಿನಿಷ್ಠವಾಗಿ ಕಾಪಾಡಿಕೊಂಡು ಬಂದ ಸಮಾಜಕ್ಕೆ ಅದರ ವ್ಯತಿರಿಕ್ತ ಪರಿಣಾಮಗಳನ್ನು ಪರಿಚಯಿಸಿ ಆಘಾತ ನೀಡಿದರು.

ಯಾವುದು ಹೆಚ್ಚು ಪ್ರೀತಿಪಾತ್ರವಾಗುತ್ತದೋ ಅದು ನಿರಾಸೆಯ ಮೂಲವಾಗುತ್ತದೆ. ಯಾವುದನ್ನು ತೀವ್ರವಾಗಿ ಆರಾಧಿಸಲಾಗುತ್ತದೆಯೋ ಅದು ಹಿಂಸೆಯ ಮೂಲವಾಗುವುದು ಪ್ರಕೃತಿಯ ಅಣಕವೆಂದು ತೋರುತ್ತದೆ. ಕೆಲವು ಧರ್ಮಗಳ ದೇವರ ವಿಷಯದಲ್ಲೂ ಹೀಗೇ ಆಗುತ್ತಿದೆ. ಹಸುವು ಹಿಂದೂಗಳ ಆರಾಧ್ಯ ದೈವವಾಗಿರುವಂತೆಯೆ ಅದು ಸಮಾಜದಲ್ಲಿ ಹಿಂಸೆಯನ್ನು ಹುಟ್ಟುಹಾಕುತ್ತಿರುವುದು ವಿಪರ್ಯಾಸವಾಗಿದೆ. ಜಾತಿಪದ್ಧತಿ ಡಯಾಬಿಟಿಸ್‌ನಂತೆ ಕಾಯಿಲೆಯಲ್ಲದ ಗಂಭೀರ ಕಾಯಿಲೆ. ಅದರ ಅಸಂಖ್ಯ, ಅಗೋಚರ ದುಷ್ಪರಿಣಾಮಗಳು ಎಲ್ಲ ಅಂಗಗಳ ಮೇಲೂ ಉಂಟಾಗುತ್ತವೆ. ಬೆಳವಣಿಗೆ ಕ್ಷೀಣಿಸುತ್ತಾ ಕುಬ್ಜತೆಯ ಅರಿವಾಗತೊಡಗುತ್ತದೆ. ಭಾರತದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ದಲಿತರಿಗೆ ನೀಡಿದ ಅಕ್ಷರವೆಂಬ ಔಷಧಿಯ ಪರಿಣಾಮ ಜಾತಿಪದ್ಧತಿಯ ಅನಿಷ್ಟತೆಯ ದುಷ್ಪರಿಣಾಮಗಳು ಈಗ ಕಣ್ಣಿಗೆ ಗೋಚರವಾಗುತ್ತಿವೆ.

ಈ ಅನಿಷ್ಟಪದ್ಧತಿಯನ್ನು ತೊಡೆದುಹಾಕಲು ಅಂಬೇಡ್ಕರ್ ಸೇರಿದಂತೆ ಅನೇಕ ಮನಸ್ಸುಗಳು ಹೋರಾಡಿವೆ ಮತ್ತು ಹೋರಾಡುತ್ತಿವೆ. ಆದರೆ ಅದನ್ನು ವಿನಾಶಗೊಳಿಸಲು ಸಾಧ್ಯವಾಗಿಲ್ಲ. ಕೇವಲ ಹುಟ್ಟಿನ ಕಾರಣದಿಂದಲೇ ಅದರಿಂದ ಪರೋಕ್ಷ ಮೇಲರಿಮೆಗರಿಮೆಗಳನ್ನು, ಸವಲತ್ತುಗಳನ್ನು ಅನಾಯಾಸ ಪಡೆದುಕೊಳ್ಳುತ್ತಿರುವವರು ಈ ಪದ್ಧತಿಯನ್ನು ಜತನವಾಗಿ ಕಾಪಿಟ್ಟುಕೊಂಡು ಬರುತ್ತಿದ್ದಾರೆ. ಸುಧಾರಕರ ಪ್ರಯತ್ನಗಳು ಇತಿಹಾಸದ ಗೋರಿಯಲ್ಲಿ ಹೂತುಹೋಗಿವೆ. ಅದರ ಇನ್ನೊಂದು ಮಗ್ಗಲಿನ ಒಂದು ಕುತೂಹಲಕರ ಕಥೆಯನ್ನು ನಿಮಗೆ ಪರಿಚಯಿಸಲಿಚ್ಛಿಸುತ್ತೇನೆ.

ಇಲ್ಲೊಬ್ಬ ಅಪರೂಪದ ವ್ಯಕ್ತಿ ಜಾತಿಪದ್ಧತಿಯನ್ನು ತಮ್ಮದೇ ಆದ ವಿನೂತನ ರೀತಿಯಲ್ಲಿ ಪ್ರತಿಭಟಿಸುತ್ತಿದ್ದಾರೆ. ಸಮಾಜದ ಎಲ್ಲಾ ಸ್ತರಗಳ ಜನರು ಮೇಲ್ಮುಖ ಚಲನೆಗೆ ಹಾತೊರೆಯುತ್ತಿದ್ದರೆ ಈ ವ್ಯಕ್ತಿ ಕೀಳ್ತನವನ್ನು ತಾವಾಗಿಯೇ ಆವಾಹಿಸಿಕೊಂಡು ಕಳೆದ 30 ವರ್ಷಗಳಿಂದ ವಸ್ತುಶಃ ಪರಕಾಯ ಪ್ರವೇಶವನ್ನು ಮಾಡಿ ಇನ್ನೊಂದು ಬದುಕನ್ನು ಬದುಕುತ್ತಿದ್ದಾರೆ. ಅವರೇ 59 ವರ್ಷದ ವಿಜಯ್ ದೀವನ್. ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದರೂ ಜಾತಿಪದ್ಧತಿಯಿಂದ ರೋಸಿಹೋಗಿ ಕನಿಷ್ಠರಲ್ಲಿ ಕನಿಷ್ಠವಾದ ಜಾತಿಯನ್ನು ಆಯ್ಕೆಮಾಡಿಕೊಂಡಿದ್ದಾರೆ. ಅದೇ ಸತ್ತ ದನವನ್ನು ಎತ್ತೊಯ್ದು ಚರ್ಮ ಸುಲಿದು ಮಾರುವ ಸಮಗಾರನ ಕಾಯಕ. ಇದಕ್ಕೆ ಅವರ ಕುಟುಂಬದಿಂದ ಯಾವ ಪ್ರತಿರೋಧವೂ ಬರಲಿಲ್ಲವಂತೆ.

ಮುಂಬೈ ನಗರದಲ್ಲಿ ಹುಟ್ಟಿ ಬೆಳೆದ ವಿಜಯ್ ದೀವನ್ ಯುವಕನಾಗಿದ್ದಾಗಲೇ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿದ್ದರು. ಅಲ್ಲಿಂದ ನೇರವಾಗಿ ವಿನೋಬಾ ಭಾವೆ ಅವರ ಹುಟ್ಟೂರಾದ ಗಾಗೋಡೆಗೆ ತೆರಳಿದರು. ತಮ್ಮ ಉಳಿದ ಜೀವಮಾನವನ್ನು ಅಲ್ಲಿಯೇ ಕಳೆಯುತ್ತಿದ್ದಾರೆ. ಸತ್ತ ದನಗಳ ಚರ್ಮ ಸುಲಿಯುವುದೂ ಅಸ್ಪೃಶ್ಯತೆಯನ್ನು ಹೇರಲು ಒಂದು ಕಾರಣ ಎಂದು ಬಿ.ಆರ್.ಅಂಬೇಡ್ಕರ್ ಹೇಳಿದ್ದಾರೆ. ಗಾಂಧಿ ಮತ್ತು ವಿನೋಬಾ ಭಾವೆ ಅವರು ಹಾಗೆ ನಂಬಿದ್ದರು. ಈ ಕಾಯಕದಿಂದಲೂ ಹಣ ಸಂಪಾದನೆ ಮಾಡಬಹುದು. ಆದರೆ ಅದನ್ನು ದಲಿತರೇ ಯಾಕೆ ಮಾಡಬೇಕು, ಮೇಲ್ಜಾತಿಯವರೂ ಮಾಡಲಿ ಎಂದು ಯಾರೋ ಹೇಳಿದರಂತೆ. ದೀವನ್ ಅದನ್ನು ಮನಸಾರೆ ಒಪ್ಪಿ ಮಾಡತೊಡಗಿದರು. ಆದರೆ ದಲಿತರು ಈ ವೃತ್ತಿಯನ್ನು ಮಾಡಬಾರದು ಎಂದು ಅವರು ಹೇಳುತ್ತಾರೆ.

ವಿಜಯ್ ದೀವನ್ ಒಳ್ಳೆಯ ಅರ್ಥಶಾಸ್ತ್ರಜ್ಞರಂತೆಯೂ ಮಾತನಾಡಬಲ್ಲರು. ವರ್ಷವೊಂದಕ್ಕೆ ಪ್ರತಿಹಳ್ಳಿಯಲ್ಲಿ 10 ರಿಂದ 12 ಗೋವುಗಳು ಸಾಯುತ್ತವೆ. ಅವುಗಳ ಚರ್ಮ ಹಳ್ಳಿಯ ಆರ್ಥಿಕತೆಯನ್ನು ಪೋಷಿಸುತ್ತದೆ. ಒಂದು ಹಸಿ ಚರ್ಮಕ್ಕೆ ರೂ.700/ ಬೆಲೆ ಇದೆ. ಚರ್ಮ ಸುಲಿದು ಹದಮಾಡುವವರೆಗೆ ರೂ.2000/ ಖರ್ಚಾಗುತ್ತದೆ. ಮಹಾರಾಷ್ಟ್ರ ರಾಜ್ಯದಲ್ಲಿ 40000 ಹಳ್ಳಿಗಳಿವೆ. ವರ್ಷದ ಒಟ್ಟು ಆದಾಯ ರೂ.40.00 ಕೋಟಿಗಳಾಗುತ್ತದೆ. ಇದರಿಂದ ಮಾಡುವ ಪಾದರಕ್ಷೆ ಮತ್ತಿತರ ಸಲಕರಣೆಗಳ ಆದಾಯವನ್ನು ಬೇರೆಯಾಗಿಯೇ ನೋಡಬೇಕು ಎಂದು ಹೇಳುತ್ತಾರೆ.

ಒಟ್ಟಿನಲ್ಲಿ ವಿಜಯ್ ಅವರ ಆಶಯ ಇಷ್ಟು. ಚರ್ಮ ಸುಲಿಯುವುದು ಒಂದು ಕಾಯಕ. ಅದರಿಂದ ಆದಾಯವು ಬರುತ್ತದೆ. ಅದನ್ನು ಒಂದು ಧರ್ಮಕ್ಕೆ ಅಥವಾ ಜಾತಿಗೆ ಅಂಟಿಸುವುದು ಸರಿಯಲ್ಲ ಮತ್ತು ಅವರನ್ನು ಕೀಳಾಗಿ ಕಾಣುವುದು ದುಷ್ಟತನ. ದಲಿತರು ಆ ಕಾರಣಕ್ಕಾಗಿಯಾದರೂ ಸತ್ತ ದನಗಳ ಚರ್ಮ ಸುಲಿಯುವ ವೃತ್ತಿಯನ್ನು ತ್ಯಜಿಸಬೇಕು. ವೃತ್ತಿ ಘನವೇ ಹೊರತು ಜಾತಿಯಲ್ಲ ಅದನ್ನು ಗೌರವಿಸಬೇಕು ಎಂಬ ಸಂದೇಶ ಬಿತ್ತರಿಸುತ್ತಿದ್ದಾರೆ, ಇವರ ಕುಲ ನೂರ್ಮಡಿಯಾಗಲಿ.

■ ಮೂಚಿ

## ಮಾತೇ ಮುತ್ತು

★ ಒಬ್ಬನಿಗೆ ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವ ಧೈರ್ಯವಿದ್ದರೆ, ಆತನ ಎಲ್ಲ ತಪ್ಪುಗಳೂ ಕ್ಷಮಾರ್ಹವೇ.

—ಬ್ರೂಸ್ ಲೀ

★ ಜೀವನ ಒಂದು ತೀರ್ಥಯಾತ್ರೆಯಂತೆ. ಬುದ್ಧಿವಂತರು ದಾರಿಯುದ್ದಕ್ಕೂ ತಂಗುವುದಿಲ್ಲ; ನೇರ ಗುರಿಯತ್ತ ಸಾಗುತ್ತಾರೆ.

—ಸ್ವಾಮಿ ಶಿವಾನಂದ

★ ಇನ್ನೊಬ್ಬರ ಹೊರೆಯನ್ನು ಕಡಿಮೆ ಮಾಡುವ ಯಾರೊಬ್ಬರೂ ಜಗತ್ತಿನಲ್ಲಿ ನಿಷ್ಪ್ರಯೋಜಕರಲ್ಲ.

—ಚಾರ್ಲ್ಸ್ ಡಿಕೆನ್ಸ್

★ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳ ಮೂಲಕ ಆಯಾ ಸಮಾಜದ ಸಾಮಾಜಿಕ ಪ್ರಗತಿಯನ್ನು ಅಳೆಯಬಹುದು.

—ಕಾರ್ಲ್ ಮಾರ್ಕ್ಸ್

★ ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಿ ಅಲ್ಲ, ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು – ಇದೇ ಧರ್ಮದ ಸರ್ವಸ್ವ.

—ಸ್ವಾಮಿ ವಿವೇಕಾನಂದ

★ ನಾನು ಕೇವಲ ವಿದೂಷಕನ ಪಾತ್ರವನ್ನು ಮಾತ್ರ ನಿರ್ವಹಿಸುತ್ತೇನೆ. ಹಾಗೆಂದೇ ಯಾವುದೇ ರಾಜಕಾರಣಿಗಿಂತ ನಾನು ಶ್ರೇಷ್ಠ.

—ಚಾರ್ಲಿ ಚಾಪ್ಲಿನ್

★ ಘಟನೆ ನಡೆಯುವುದಕ್ಕಿಂತ ಮುಂಚೆ ಭವಿಷ್ಯ ಹೇಳುವುದು ಒಳ್ಳೆಯದಲ್ಲ; ಘಟನೆ ನಡೆದ ನಂತರ ಭವಿಷ್ಯ ಹೇಳುವುದು ಒಳ್ಳೆಯದು.

—ವಿನ್‌ಸ್ಟನ್ ಚರ್ಚಿಲ್

★ ವ್ಯಕ್ತಿಯೊಬ್ಬನನ್ನು ಆತನ ಉತ್ತರಗಳಿಂದ ಅಳೆಯಬೇಡಿ; ಆತನ ಪ್ರಶ್ನೆಗಳಿಂದ ಅಳೆಯಿರಿ.

—ವಾಲ್ಟೇರ್